ಅಲ್ಲಿ ಬಾಗಿಲು ತೆರೆಯಲು ಹಾಕಿದ್ದಾರೆ. ನಾನು ಮಾನ್ಯ ಮಂತ್ರಿಗಳನ್ನು ಕೇಳುವುದು ಇಷ್ಟೇ, ಈ ಆಸ್ಪತ್ರೆಯನ್ನು ಈಗಲಾದರೂ ತೆಗೆಯುವುದಕ್ಕೆ ಇಚ್ಛಿಪಡುತ್ತೀರೋ ಇಲ್ಲವೋ? ಈ ರೀತಿ ಆದರೆ ಸಾರ್ವಜನಿಕರಿಂದ ವಂತಿಗೆ ತೆಗೆದುಕೊಳ್ಳುವುದು ಬಹಳ ಕಷ್ಟವಾಗುತ್ತದೆ. ಮಾನ್ಯ ಮಂತ್ರಿಗಳು ಆಶ್ವಾಸನೆ ಕೊಡಬೇಕು. ಈ ಆಸ್ಪತ್ರೆಯನ್ನು ಅವರು ಆದಷ್ಟು ಬೇಗ ತೆರೆಯಬೇಕು.

ಶ್ರೀ ಬಿ. ಬಿ. ನಿಂಗಯ್ಯ : ಮಾನ್ಯ ಅಧ್ಯಕ್ಷರೇ, ಅವರು 4 ಆಸ್ಪತ್ರೆಗಳು ಅಂತ ಹೇಳಿದರು 8 ಆಸ್ಪತ್ರೆಗಳನ್ನು ಹಾಸನ ಜಿಲ್ಲೆಗೆ ಕೊಟ್ಟಿದ್ದೇವೆ. ಅವರ ಕ್ಷೇತ್ರದಲ್ಲಿ ಹೆಂಚೂರಿನಲ್ಲಿ ಕೂಡ ಒಂದನ್ನು ಕೊಟ್ಟಿದ್ದೇವೆ. ಇನ್ನು ತಾವು ಕೇಳಿರತಕ್ಕಂಥ ಮಾಹಿತಿ ನನ್ನ ಹತ್ತಿರ ಸದ್ಯದಲ್ಲಿ ಇಲ್ಲ, ನಂತರ ನಾನು ಒದಗಿಸಿಕೊಡುತ್ತೇನೆ. ನಮ್ಮ ರಾಜ್ಯದಲ್ಲಿ ಸುಮಾರು 4 ಕೋಟಿ 6 ಲಕ್ಷ ಜಾನುವಾರುಗಳು ಇವೆ. ಅವುಗಳಿಗೆ 3070 ಆಸ್ಪತ್ರೆಗಳು ಇರಬೇಕಾಗಿತ್ತು. ಈಗಾಗಲೇ ನಾವು 200 ಆಸ್ಪತ್ರೆಗಳನ್ನು ಕೊಟ್ಟು ಕಂಡೀಷನ್ಸ್ ಫುಲ್‌ಫಿಲ್ ಮಾಡುತ್ತಿದ್ದೇವೆ. ಇಲ್ಲಿ ಇರುವ ಕಟ್ಟಡದ ಉಪಯೋಗ ಆಗುತ್ತಿಲ್ಲ ಎಂದು ಹೇಳಿದ್ದೀರಿ ಅದಕ್ಕೆ ಡಾಕ್ಟರ್ಸ್ ಮತ್ತು ಸಪೋರ್ಟಿಂಗ್ ಸ್ಟ್ಯಾಪ್ ನೇಮಕಾತಿ ಆಗುತ್ತವೆ. ತಕ್ಷಣ ಅಲ್ಲಿಗೆ ಮಂಜೂರಾತಿ ಮಾಡಿ ಕೊಟ್ಟು ಕೆಲಸ ಮಾಡುತ್ತೇವೆ.

ಅಧ್ಯಕ್ಷರು : ಒಂದು ತಿಂಗಳೊಳಗಾಗಿ ಮಾಡಿ.

ಶ್ರೀ ಬಿ.ಬಿ. ನಿಂಗಯ್ಯ : ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಹುಬ್ಬಳ್ಳಿ - ಧಾರವಾಡ ಬೈಪಾಸ್ ರಸ್ತೆ

311 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ- ಧಾರವಾಡ ಬೈಪಾಸ್ ರಸ್ತೆ ನಿರ್ಮಾಣ ಕಾರ್ಯದ ಸಲುವಾಗಿ ಹಣ ಮಂಜೂರು ಮಾಡಲು ಕೇಂದ್ರ ಸರ್ಕಾರವು ಒಪ್ಪಿದೆಯೇ?

ಆ) ಒಪ್ಪಿದಲ್ಲಿ ಎಷ್ಟು ಹಣ ಮಂಜೂರು ಮಾಡಲು ಒಪ್ಪಿದೆ? ಸದರಿ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು?

ಇ) ಸದರಿ ಬೈಪಾಸ್ ರಸ್ತೆಯ ನಿರ್ಮಾಣ ಕೆಲಸವನ್ನು ಯಾವ ಕಂಪನಿಗೆ ವಹಿಸಲಾಗಿದೆ? ಯಾವ ಕರಾರುಗಳ ಮೇಲೆ ಕೆಲಸ ವಹಿಸಲಾಗಿದೆ? (ವಿವರ ಒದಗಿಸುವುದು)

ಈ) ಸದರಿ ರಸ್ತೆ ನಿರ್ಮಾಣ ಕೆಲಸ ಎಂದಿನಿಂದ ಪ್ರಾರಂಭಿಸಲಾಗುವುದು, ಮತ್ತು ಎಷ್ಟು ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಪ್ರಥಮ ಹಂತದ ಕಾಮಗಾರಿಗೆ ಮಾತ್ರ ಕೇಂದ್ರ ಸರ್ಕಾರವು ಹಣ ಬಿಡುಗಡೆ ಮಾಡಿದ್ದು, ಇಡೀ ಹೊರ ರಸ್ತೆ ಕಾಮಗಾರಿಗಳನ್ನು ಬಿ.ಒ.ಟಿ. ಆಧಾರದ ಮೇಲೆ ಕೈಗೊಳ್ಳಲು ಪ್ರಸ್ತಾಪಿಸಿದೆ.

ಆ) ಮೊದಲನೆ ಹಂತಕ್ಕೆ ಇದುವರೆವಿಗೂ ಆಗಿರುವ ವೆಚ್ಚ 496.00 ಲಕ್ಷ ರೂ.ಗಳು ಕೇಂದ್ರದಿಂದ ಬಿಡುಗಡೆಯಾಗಿದೆ.

ಇ) ಇಡೀ ಹೊರರಸ್ತೆ ನಿರ್ಮಾಣವನ್ನು ಬಿ.ಒ.ಟಿ. ಆಧಾರದ ಮೇಲೆ ಪುಣೆಯ ಭಾರತ ಫೋರ್ಜ್ ಕಂಪನಿಯವರಿಗೆ ವಹಿಸಿಕೊಡಲು ಒಪ್ಪಿಗೆ ಪತ್ರವನ್ನು ಕೇಂದ್ರ ಸರ್ಕಾರವು ನೀಡಿರುತ್ತದೆ. ಅಂತಿಮ ಕರಾರನ್ನು ಇನ್ನೂ ಮಾಡಿಕೊಂಡಿರುವುದಿಲ್ಲ.

ಈ) ಕೇಂದ್ರ ಸರ್ಕಾರವು ಅಂತಿಮ ಕರಾರನ್ನು ಅನುಮೋದಿಸಿದ ನಂತರ ಒಂದು ತಿಂಗಳಿನೊಳಗೆ ಪ್ರಾರಂಭಗೊಳಿಸಲಾಗುವುದು. ಕೇಂದ್ರ ಸರ್ಕಾರವು (ಕನ್ಸೆಷನ್) ಒಪ್ಪಂದದ ಕರಾರನ್ನು ಮಾಡಿಕೊಂಡ ನಂತರ ಕಾಮಗಾರಿಯನ್ನು ಸುಮಾರು ಎರಡು ವರ್ಷಗಳಲ್ಲಿ ಪೂರ್ಣ ಗೊಳಿಸುವ ಸಂಭವವಿದೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಹುಬ್ಬಳ್ಳಿ-ಧಾರವಾಡ ಬೈಪಾಸ್ ರಸ್ತೆಯ ಬಗ್ಗೆ ಪ್ರಥಮ ಹಂತದ ಕಾಮಗಾರಿಗೆ ಮಾತ್ರ ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆ ಮಾಡಿದ್ದಾರೆ ಎಂದು ಹೇಳಿದ್ದಾರೆ. ಪ್ರಥಮ ಹಂತದ ಕಾಮಗಾರಿ ಯಾವಾಗ ಮುಗಿಯುತ್ತದೆ ಎಂದು ಸ್ಪಷ್ಟವಾಗಿ ಹೇಳಲಿಲ್ಲ. ಅದಕ್ಕೆ496 ಲಕ್ಷ ರೂಪಾಯಿಗಳು ಅಂತರ ಹೇಳಿದ್ದಾರೆ. ಈ ಬೈಪಾಸ್ ರಸ್ತೆಯನ್ನು ಪುಣೆಯ ಭಾರತ್ ರೋಡ್ಸ್ ಕಂಪನಿಯವರಿಗೆ ವಹಿಸಿಕೊಡಲು ಒಪ್ಪಿಗೆಯ ಪತ್ರವನ್ನು ಕೇಂದ್ರ ಸರ್ಕಾರದಿಂದ ನೀಡಿರುತ್ತದೆಂದು ಹೇಳಿದ್ದಾರೆ. ಈ ಒಂದು ಬೈಪಾಸ್ ರಸ್ತೆ 1987ರಿಂದ ಇದುವರೆಗೂ ಪ್ರಾರಂಭ ಆಗಿಲ್ಲ. ಕಳೆದ ಅಧಿವೇಶನದಲ್ಲಿ ನಾನು ಈ ಬಗ್ಗೆ ಪ್ರಶ್ನೆಯನ್ನು ಕೇಳಿದಾಗ ಕಲ್ಯಾಣಿ ಗ್ರೂಪ್ ಸಂಸ್ಥೆಯವರಿಗೆ ನಾವು ಅದನ್ನು ವಹಿಸಿ ಕೊಡುತ್ತೇವೆಂದು ಮಾನ್ಯ ಸಚಿವರು ಹೇಳಿದ್ದರು. ಸದನದಲ್ಲಿ ಹೇಳುವುದು ಒಂದು, ಪತ್ರಿಕೆಗಳಲ್ಲಿ ಹೇಳುವುದು ಒಂದು, ಈ ರೀತಿಯಾದ ವ್ಯತಿರಿಕ್ತವಾದ ಹೇಳಿಕೆಗಳು ಬರುತ್ತಿವೆ. ಪತ್ರಿಕೆಗಳಲ್ಲಿ 65 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ ಎಂದು ಹೇಳಿದ್ದರು. ಮತ್ತು ಕಲ್ಯಾಣಿ ಗ್ರೂಪ್‌ಗೆ ವಹಿಸಿಕೊಡಲಾಗಿದೆ ಅಂತ ಹೇಳಿದರು. ಇದು ನೆನೆಗುದಿಗೆ ಬೀಳುತ್ತಿದೆ. ಪ್ರತಿಯೊಂದು ಅಧಿವೇಶನದಲ್ಲಿ ಪ್ರಶ್ನೆಯನ್ನು ಕೇಳಿದಾಗ ಬೇರೆ ಬೇರೆ ರೀತಿಯ ಉತ್ತರಗಳು ಬರುತ್ತಿವೆ. ಈ ಬಗ್ಗೆ ನನಗೆ ಸ್ಪಷ್ಟವಾಗಿ ಹೇಳಬೇಕು ಹುಬ್ಬಳ್ಳಿ ಧಾರವಾಡ ಬೈಪಾಸ್ ರಸ್ತೆಯನ್ನು ಯಾವಾಗ ಪ್ರಾರಂಭ ಮಾಡುತ್ತೀರಿ?

ಶ್ರೀ ಸಿ.ಎಂ. ಉದಾಸಿ : ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಪತ್ರಿಕೆಗಳಲ್ಲಿ ಬಂದಿರುವಂತಹ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿ ಹೇಳುತ್ತಿದ್ದಾರೆ. ನಾನು ಪತ್ರಿಕೆಗಳಲ್ಲಿ ಹೇಳಿರುವುದು ಈ ರಸ್ತೆಯನ್ನು ಡಿ.ಒ.ಟಿ. ಸಿಸ್ಟಂನಲ್ಲಿ ಮಾಡಲು ಭಾರತ್ ಗ್ರೂಪ್ ಸಂಸ್ಥೆಯವರು 65 ಕೋಟಿ ರೂಪಾಯಿಗಳ ಅಂದಾಜನ್ನು ಮಾಡಿದ್ದಾರೆಂದು ಹೇಳಿದ್ದೇನೆಯೇ ಹೊರತಾಗಿ 65 ಕೋಟಿ ರೂಪಾಯಿಗಳು ಕೇಂದ್ರ ಸರ್ಕಾರದಿಂದ ಬಿಡುಗಡೆ ಆಗಿದೆ ಎಂದು ನಾನು ಎಲ್ಲೂ ಹೇಳಲಿಲ್ಲ. ಇದನ್ನು ನಾನು ಅವರ ಗಮನಕ್ಕೆ ತರುತ್ತೇನೆ. ಈ ರಸ್ತೆಗೆ ಸುಮಾರು 4.96 ಲಕ್ಷ ರೂಪಾಯಿಗಳು 12ನೇ ಕಿಲೋಮೀಟರ್ ವರೆಗೂ ಮಾಡಲು ಮೊದಲನೇ ಹಂತಕ್ಕೆ ಬಿಡುಗಡೆ ಆಗಿದೆ. ಈ ವೆಚ್ಚವನ್ನು ಕೇಂದ್ರ ಸರ್ಕಾರವೇ ಭರಿಸುತ್ತದೆ. ಕೆ.ವಿ. ಶೆಟ್ಟಿ ಕಂಪನಿಯವರು ಈ ರಸ್ತೆಯ ಕೆಲಸವನ್ನು ಮಾಡಿದ್ದಾರೆ. ಅದರಲ್ಲಿ ಅರ್ಧ ಡಾಂಬರೀಕರಣ

ಮಾಡುವ ಕೆಲಸ ಮಾತ್ರ ಉಳಿದಿದೆ. ಇನ್ನು ಉಳಿದಂತಹ 12.ಕಿ.ಮೀ.ಯಿಂದ 20 ಕಿ.ಮೀ. ವರೆಗಿನ ರಸ್ತೆಗೆ ಬೇಕಾಗಿರುವಂತಹ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಈ 20 ಕಿ.ಮೀ.ರಸ್ತೆಯನ್ನು ನಿರ್ಮಾಣ ಮಾಡುವ ಸಲುವಾಗಿ ಇವತ್ತು ಬಿ.ಓ.ಟಿ. ಸಿಸ್ಟಮ್ ಮೇಲೆ ಈ ರಸ್ತೆಯನ್ನು ಭಾರತ್ ಫೋರ್ಜ್ ಕಂಪನಿಯವರಿಗೆ ಒಪ್ಪಿಗೆಯನ್ನು ಕೊಡಲಾಗಿದೆ. ಇದಕ್ಕೆ ಕೇಂದ್ರ ಸರ್ಕಾರದ ಕೊನೆಯ ಅಗ್ರಿಮೆಂಟ್ ಆಗಬೇಕು. ಈಗಾಗಲೇ ಇದು ಪೂರ್ವಭಾವಿಯಾಗಿ ಆಗಬೇಕಾದಂತಹ ಒಪ್ಪಂದಗಳೆಲ್ಲವೂ ಆಗಿದ್ದರೂ ಸಹಿತ ಕೊನೆಯ ಒಂದು ಅಗ್ರಿಮೆಂಟ್ ಆದಮೇಲೆ ವರ್ಕ್ ಪ್ರಾರಂಭ ಮಾಡುತ್ತಾರೆ. ಪ್ರಾರಂಭ ಮಾಡಿ 6 ತಿಂಗಳಲ್ಲಿ ಮೊದಲನೆಯ ಹಂತದ ಕೆಲಸ ಮುಗಿಯುತ್ತದೆ. ಎರಡು ವರ್ಷದಲ್ಲಿ ಸಂಪೂರ್ಣವಾಗಿ ರಸ್ತೆ ಕೆಲಸ, ಮುಗಿಯುತ್ತದೆಂದು ನಾನು ಹೇಳಲು ಇಷ್ಟಪಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಸಚಿವರೂ ಕೂಡ ಧಾರವಾಡ ಜಿಲ್ಲೆಯವರಾಗಿದ್ದು ದಯವಿಟ್ಟು ಇದರ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು. ಸಣ್ಣ ಸಣ್ಣ ಹಳ್ಳಿಗಳು ಅಂದರೆ ಯಮನೂರು ರಸ್ತೆ ಕೂಡ ಬೈಪಾಸ್ ರಸ್ತೆಯಾಗಿದೆ. ಹುಬ್ಬಳ್ಳಿ ಮತ್ತು ಧಾರವಾಡದಲ್ಲಿ ಜನದಟ್ಟಣೆ ಜಾಸ್ತಿಯಾಗಿ ಸಂಚಾರಕ್ಕೆ ಅಡ್ಡಿಯಾಗಿದ್ದು ಇದರಿಂದ ಪರಿಸರ ಮಾಲಿನ್ಯ ಸಹ ಕೆಡುತ್ತಿದೆ. ಆದುದರಿಂದ ಹುಬ್ಬಳ್ಳಿ ಮತ್ತು ಧಾರವಾಡಕ್ಕೆ ಬೈಪಾಸ್ ರಸ್ತೆ ಅತ್ಯಾವಶ್ಯಕವಾಗಿರುವುದರಿಂದ ಮಾನ್ಯ ಸಚಿವರು ಹೆಚ್ಚಿನ ಕಾಳಜಿ ವಹಿಸಿ ಆದಷ್ಟು ಜಾಗ್ರತೆ ಕೆಲಸ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಸಿ.ಎಂ. ಉದಾಸಿ : ತೀವ್ರಗತಿಯಲ್ಲಿ ಕೆಲಸ ಮಾಡಲು ಕ್ರಮಕೈಗೊಳ್ಳುತ್ತೇನೆ.

ಕನ್ನಡ ಚಿತ್ರಗಳಿಗೆ ಸಹಾಯಧನ

313- ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಕರ್ನಾಟಕದಲ್ಲಿ ತಯಾರಾದ ಕನ್ನಡ ಚಿತ್ರಗಳಿಗೆ ಸಹಾಯಧನ ನಿಲ್ಲಿಸಲು ಸರ್ಕಾರವು ನಿರ್ಧರಿಸಿದೆಯೇ?

2) ಕನ್ನಡ ಚಲನಚಿತ್ರಗಳಿಗೆ ಯಾವ ಕಾರಣಕ್ಕಾಗಿ ಸಹಾಯಧನವನ್ನು ನೀಡಲು ಸರ್ಕಾರವು ನಿರ್ಧರಿಸಿತ್ತು. ಯಾವ ವರ್ಷದಿಂದ ಸಹಾಯಧನವನ್ನು ಸರ್ಕಾರ ನೀಡಲು ಪ್ರಾರಂಭಿಸಿದೆ?

ಶ್ರೀ ಎಂ. ಸಿ. ನಾಣಯ್ಯ (ವಾರ್ತಾ ಮತ್ತು ಪ್ರಚಾರ ಸಚಿವರು) :

1) 1996-97ನೇ ಸಾಲಿನಿಂದ ಗುಣಮಟ್ಟದ ಆಧಾರದ ಮೇಲೆ ಮಾತ್ರ ಕನ್ನಡ ಚಲನಚಿತ್ರಗಳಿಗೆ ಸಹಾಯ ಧನವನ್ನು ಕೊಡಲು ಸರಕಾರ ನಿರ್ಧರಿಸಿದೆ.

2) ಕನ್ನಡ ಚಲನ ಚಿತ್ರೋದ್ಯಮವು ಸಂಪೂರ್ಣವಾಗಿ ಕರ್ನಾಟಕದಲ್ಲಿಯೇ ನೆಲೆಯೂರಬೇಕೆಂಬ ಉದ್ದೇಶದಿಂದ ಮತ್ತು ಉತ್ತಮ ಗುಣಮಟ್ಟದ ಚಿತ್ರಗಳನ್ನು ನಿರ್ಮಿಸಲು ಅವಕಾಶ ಕೊಡಬೇಕೆಂಬ ಉದ್ದೇಶದಿಂದ ಸಹಾಯಧನವನ್ನು ನೀಡಲು ಸರ್ಕಾರವು ನಿರ್ಧರಿಸಿದ್ದು, 1967-68ನೇ ವರ್ಷದಿಂದ ಸಹಾಯಧನ ನೀಡಲು ಪ್ರಾರಂಭಿಸಿದೆ.